ಸಭೆಯು ದಿನಾಂಕ ಮತ್ತು ವೇಳೆಯನ್ನು ನಿರ್ಧರಿಸಿದ ಮೇಲೆ ಕಾರ್ಯದರ್ಶಿಯವರು ಅದರಂತೆ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಅವರು ಕ್ರಮ ತೆಗೆದುಕೊಳ್ಳದೆ ಅಧ್ಯಕ್ಷರ ಆದೇಶವನ್ನು ಉಲ್ಲಂಘಿಸಿದರೆ ಶಿಸ್ತು ಕ್ರಮಕ್ಕೆ ಒಳಗಾಗುವರು. ಆದುದರಿಂದ ಆದೇಶದ ಉಲ್ಲಂಘನೆಯು ವರದಿಯನ್ನು ಸರ್ಕಾರಕ್ಕೆ ಅಧ್ಯಕ್ಷರು ಕಳುಹಿಸಿ ಕೊಟ್ಟಿಲ್ಲಿ ತಪ್ಪಿತಸ್ಥ ನೌಕರರ ಒಗ್ಗೆ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ತಾಲ್ಲೂಕು ಸಮಿತಿಯು ಅಧ್ಯಕ್ಷರು ಹಿಂದಿನ ತಾಲ್ಲೂಕು ಬೋರ್ಡ್ ಅಧ್ಯಕ್ಷರ ಕೊಠಡಿಯನ್ನು ಉಪಯೋಗಿಸಬಹುದು.

9. ರಾಜ್ಯದ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಮಸ್ಯೆಗಳ ನಿವಾರಣೆ.

ಶ್ರೀಮತಿ ಪುನ್ನೂರಮಾ ಮಧ್ವರಾಜ್. —ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಸಾಮಾನ್ಯ ಶ್ರೇಣಿ ಪ್ರಾಧಿಕಾರ ೧೯೧೦-೭೮ರಲ್ಲಿ ಅಸ್ತಿತ್ವಕ್ಕೆ ಬಂತು. ಅನಂತರ ಆಲ್ಲಿ ಯಾವುದೇ ನೌಕರರ ನೇಮಕಾತಿ ತಿಲ್ಲಿ. ಪ್ರಾಥಮಿಕ ಬ್ಯಾಂಕುಗಳ ಸಾಲ ನೀಡಿಕೆ ವಸೂಲಿ ಕಳೆದ ೧೦ ವರ್ಷಗಳಲ್ಲಿ ಎಷ್ಟೋ ಪಾಲು ಹೆಚ್ಚಿದೆ. ರೈತರಿಗೆ ಸಕಾಲದಲ್ಲಿ ಸಮರ್ಪಕ ನೆರವು ನೀಡಲು, ಪ್ರಾಥಮಿಕ ಬ್ಯಾಂಕುಗಳು ದಿನಗೂಲಿ ವೇತನದಲ್ಲಿ ನೌಕರರನ್ನು ನೇಮಿಸಿಕೊಂಡಿದ್ದಾರೆ ಅವರಲ್ಲಿ ಬಾಯಂ ಸಿಬ್ಬಂದಿಗಳಂತೆಯೇ ಕೆಲಸ ಮಾಡುತ್ತಿದ್ದರೂ, ದಿನಗೂಲಿ ಪಡೆದು ದುಡಿಯುವುದು ಜೀತಾಸಮಾನವಾದ್ದು ಅದಂ ತಪ್ಪಿಲ್ಲ. ಇಂಥ ೩೭೭ ಮಂದಿ ದಿನಗೂಲಿ ನೌಕರರು ಇದ್ದಾರೆಂದೂ ಅವರನ್ನು ಖಾಯಂಗೊಳಿಸಲು ಸಾಕಷ್ಟು ಹುದ್ದೆಗಳು ಇದ್ದರೂ ಸರಕಾರ ಮಂಜೂರಾತಿ ಕೊಟ್ಟಿಲ್ಲವೆಂದು ತಿಳಿದು ಬಂದಿದೆ, ಈ ಸಂತ್ರಸ್ತ ದಿನಗೂಲಿ ನೌಕರರಿಂದ ಕಳೆದ ಒಂದು ದಶಕದಿಂದ ಅಹವಾಲು ಹೋಗುತ್ತಲೇ ಇವೆ. ಮಾನ್ಯ ಮುಖ್ಯಮಂತ್ರಿಗಳಿಗೆ, ಸಹಕಾರ ಮಂತ್ರಿಗಳಿಗೆ ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಬ್ಯಾಂಕಿನ ಅಧ್ಯಕ್ಷರಿಗೆ, ಪ್ರಾಧಿಕಾರಕ್ಕೆ ತಿರುಗಿ ತಿರುಗಿ ಹೋಗುತ್ತಲೇ ಇದೆ. ಈ ಅಹವಾಲುಗಳಿಗೆ ನಿವೃತ್ತಿ ಇಲ್ಲವೆ? ದಿನಗೂಲಿ ನೌಕರರ ಬವಣೆಗೆ ಮಂಕ್ಕಿ ಇಲ್ಲವೆ? ಸರಕಾರಕ್ಕೆ ಪ್ರಾಧಿಕಾರಕ್ಕೆ ದಾರಿತೋರುವ ಶಕ್ತಿ ಇಲ್ಲವೆ? ಬೇರೆ ಇಲಾಖೆಗಳಲ್ಲಿ ಖಾಯಂಗೊಳಿಸಿದಂತೆ ಇಲ್ಲಿಯೂ ಪರಿಹಾರ ನೀಡಲು ಯೋಚ್ಕಿ ಇಲ್ಲವೆ? ಅಥವಾ ಸಮಸ್ಯೆ ನಿವಾರಿಸಲು ಆಸಕ್ತಿ ಇಲ್ಲವೆ? ಈ ಕುರಿತು ಸರಕಾರ ಸ್ಪಷ್ಟೀಕರಣ ನಿಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಚ್. ವಿಶ್ವಾಂತಯ್ಯ. —ಮಾನ್ಯ ಅಧ್ಯಕ್ಷರೆ, ಮಾನ್ಯ ಕುಶಾಲ ಅವರು ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಒಪ್ಪಿದರೆ ಒಟ್ಟಿಗೆ ಉತ್ತರ ಕೊಡಲು ಅನುಕೂಲವಾಗುತ್ತದೆ.

ಶ್ರೀ ಕೆ. ಕುಶಾಲ. —ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯಾದ್ಯಂತ ಪ್ರಾಥಮಿಕ ಸಹಕಾರೀ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ಅಸ್ತಿತ್ವಕ್ಕೆ ಬಂದಂದಿನಿಂದ ನೌಕರರ ಸೇವಾ ನಿಯಮ ಹಾಗೂ ನೇಮಕಾತಿಯನ್ನು ಮಾಡುವ ಅಧಿಕಾರವನ್ನು ಆ ಬ್ಯಾಂಕಿನ ಆಡಳಿತ ಮಂಡಲಿ ಪಡೆದುಕೊಂಡಿತು. ಆದರೆ, ಪ್ರಾಧಿಕಾರ ಅಸ್ತಿತ್ವಕ್ಕೆ ಬಂದನಂತರ ಈತನಕ ಯಾವುದೇ ನೌಕರನನ್ನು ನೇಮಕಾತಿ ಮಾಡಿರುವುದಿಲ್ಲ. ಆಡಳಿತ ಮಂಡಲಿಯವರು ಕೇಳಿಕೊಂಡಾಗ ಹೆಚ್ಚಿನ ಸಿಬ್ಬಂದಿಗಳನ್ನು ಒದಗಿಸಲು ಅಸಾಧ್ಯವಾದುದರಿಂದ ಈ ಸಂದರ್ಭದಲ್ಲಿ ಬ್ಯಾಂಕಿನ ಹಿತದೃಷ್ಟಿಯಿಂದ ಆಡಳಿತ ಮಂಡಲಿಯವರು ದಿನಗೂಲಿ ವೇತನದಲ್ಲಿ ನೌಕರರನ್ನು ನೇಮಕಾತಿ ಮಾಡಿರುವರು. ಈ ರೀತಿ ೧೯೭೮ರಿಂದ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದರೂ, ಸದರಿಯವರ ನೌಕರಿ ಖಾಯಂಗೊಳ್ಳದೆ ಈ ಇಲಾಖೆಯಲ್ಲಿ ರಾಜ್ಯಾದ್ಯಂತ ಸುಮಾರು ೩೭೭ ಮಂದಿ ದಿನಗೂಲಿ ನೌಕರರು ಒಂದುರೀತಿಯ ಶೋಷಣೆಗೆ ಒಳಗಾಗಿರುವುದು ತಿಳಿದುಬಂದಿರುತ್ತದೆ ಈಗ ರಾಜ್ಯಾದ್ಯಂತ ೩೭೭ ಜನ ಈ ದಿನಗೂಲಿ ನೌಕರರು ದುಡಿಯುತ್ತಿದ್ದು ಈ ಇಲಾಖೆಯಲ್ಲಿ ೩೭೭ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇರುವುದು. ಈ ಇಲಾಖೆಯ ಆಡಳಿತ ಮಂಡಲಿಯು ಪ್ರಾಧಿಕಾರವು ಸದರಿ ನೌಕರರನ್ನು ಖಾಯಂಗೊಳಿಸಲು ಒಪ್ಪಿಕೊಂಡರೂ, ಈ ನೌಕರರ ಖಾಯಂ ಮಂಜೂರಾತಿ ಬಗ್ಗೆ ಸರಕಾರ ಅನುಮತಿ ನೀಡದೆ ಇದ್ದುದರಿಂದ, ೧೯೭೮ರಿಂದಲೂ ಈ ನೌಕರರ ಅಮೂಲ್ಯವಾದ ಬೇಡಿಕೆ ತಡೆಹಿಡಿಯಲ್ಪಟ್ಟಿರುವುದು ಸರಿಯೆ? ದಿನಗೂಲಿ ನೌಕರರ ಹುದ್ದೆ

ಖಾಯಂ ಆಗದೇ ಇರಲು ಕಾರಣ ಏನು? ಸದರಿಯವರ ದಂಡಿತಕ್ಕೆ ಬೆಲೆ ಇಲ್ಲವೆ? ರಾಜ್ಯದಲ್ಲಿ ಎಲ್ಲಾ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ದಿನಗೂಲಿ ಹಾಗೂ ಸ್ಥಳೀಯ ನೌಕರರನ್ನು ಖಾಯಂಗೊಳಿಸಿದಂತೆ ಇವರನ್ನು ಖಾಯಂಗೊಳಿಸದಿರಲು ಕಾರಣವೇನು? ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಎತ್ತಿರುವ ವಿಷಯದ ಬಗ್ಗೆ ಈಗಾಗಲೇ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಕರ್ನಾಟಕ ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸುಮಾರು ೩೭೧ ಜನರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ಆದರೆ, ಇದು ಮೀಸಲಾತಿಗೆ ವಿರುದ್ಧವಾಗಿದೆ. ಅಲ್ಲದೆ ಕೆಲವು ಹುದ್ದೆಗಳು ಖಾಲಿ ಇಲ್ಲದೇ ಇದ್ದರೂ ನೇಮಕಗಳನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ತೀವ್ರವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

10 ಹೊನ್ನಾವರ ತಾಲ್ಲೂಕಿನಲ್ಲಿರುವ ಸೇವಾ ಸಹಕಾರ ಸಂಘಗಳನ್ನು ಉಚ್ಚ ನ್ಯಾಯಾಲಯದ ಆದೇಶದಂತೆ ಸಂಯೋಜಿಸುವುದು.

ಶ್ರೀ ಆರ್. ಎನ್. ನಾಯಕ್.—ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿರುವ

(೧) ಕರಿಕಾನ ಪರಮೇಶ್ವರಿ ಸೇವಾ ಸಹಕಾರ ಸಂಘ, ಸಾಲಕೋಡು

(೨) ವ್ಯವಸಾಯ ಸೇವಾ ಸಹಕಾರಿ ಸಂಘ, ಹೊಸಾಕುಳಿ

(೩) ವ್ಯವಸಾಯ ಸೇವಾ ಸಹಕಾರಿ ಸಂಘ, ಮುಗವಾ

(೪) ವ್ಯವಸಾಯ ಸೇವಾ ಸಹಕಾರಿ ಸಂಘ, ಹೆಬ್ಬಾನಕೇರಿ, ಇವುಗಳನ್ನು ಸಂಯೋಜಿಸಿ ಒಂದೇ ಸೇವಾ ಸಹಕಾರಿ ಸಂಘವನ್ನಾಗಿ ಪರಿವರ್ತಿಸಬೇಕೆಂದು ಹಿಂದೆ ಸರಕಾರ ಆದೇಶಿಸಿತ್ತು. ಸದರಿ ಆದೇಶದ ವಿರುದ್ಧ ಸಂಘಗಳವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ, ಅರ್ಜಿಯೂ ಸಹ ತೀರ್ಪಾನವಾಗಿ, ಸರಕಾರಿ ಆದೇಶವನ್ನು ಹೈಕೋರ್ಟು ಎತ್ತಿ ಹಿಡಿದ ಆದೇಶ ಬಂದು ಬಹಳ ದಿನಗಳು ಕಳೆದವು. ಆದರೂ ಸಹ, ಸಂಬಂಧಪಟ್ಟ ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಒಳಗಾಗಿ ಮೇಲೆ ಹೇಳಿದ ಸಹಕಾರಿ ಸಂಘಗಳನ್ನು ಸಂಯೋಜಿಸದೆ ಹಾಗೆಯೇ ಉಳಿಸಿದ್ದಾರೆ. ಈ ಬಗ್ಗೆ ಸೂಕ್ತ ಆದೇಶ ಹೊರಡಿಸುವ ಬಗ್ಗೆ ಹಾಗೂ ಸರಕಾರಿ ಆಜ್ಞೆಯನ್ನು ಜಾರಿಗೊಳಿಸದೇ ಇರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ.— ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗಿ ಮೇಲೆ ಹೇಳಿದ ಸಹಕಾರಿ ಸಂಘಗಳನ್ನು ಸಂಯೋಜಿಸದೆ ಹಾಗೆಯೇ ಬಿಟ್ಟಿಲ್ಲ. ಕೆಲವೊಂದು ಮನವಿಗಳು ಬಂದಿವೆ, ಅವೆಗಳನ್ನು ಪರಿಶೀಲಿಸುತ್ತಿದ್ದೇವೆ. ಆದಷ್ಟು ತೀವ್ರವಾಗಿ ತೀರ್ಮಾನ ತೆಗೆದುಕೊಂಡು ಸೂಕ್ತ ನಿರ್ದೇಶನ ಕೊಡುತ್ತೇನೆ.

11 ಹೊಸದುರ್ಗ ಕ್ಷೇತ್ರದ ಯಲ್ಲಾಬೋವಿಹಟ್ಟಿ ಕಾಲೋನಿಯಲ್ಲಿ ಬೆಂಕಿ ಅನಾಹುತವಾಗಿರುವುದರಿಂದ ಪರಿಹಾರಕ್ಕಾಗಿ ಮನವಿ.—

ಶ್ರೀ ಜಿ. ರಾಮದಾಸ್.—ಹೊಸದುರ್ಗ ಕ್ಷೇತ್ರ ವ್ಯಾಪ್ತಿದಕೆರೆ ಹೋಬಳಿ, ಯಲ್ಲಾಬೋವಿಹಟ್ಟಿ ಕಾಲೋನಿಯಲ್ಲಿ ಸುಮಾರು ೨೦೦ ಕುಟುಂಬಗಳು ವಾಸ ಮಾಡುತ್ತಾ ಇದ್ದಾರೆ. ಇಲ್ಲಿ ವಾಸ ಮಾಡುವ ಜನಗಳೆಲ್ಲಾ ಪರಿಶಿಷ್ಟ ವರ್ಗದವರು ಸದರಿ ಕಾಲೋನಿಯಲ್ಲಿ ೮ ದಿವಸಗಳ ಹಿಂದೆ, ಸುಮಾರು ೩೦ ಕುಟುಂಬದ ರಾಗಿ ಹುಲ್ಲು ಬಣವೆಗಳಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಸಂಪೂರ್ಣವಾಗಿ ಭಸ್ಮವಾಗಿ ಹೋಗಿವೆ. ಈ ಕಾರಣದಿಂದ ಈ ಬಡ ಜನಗಳು ಬಹಳ ತೊಂದರೆಗೀಡಾಗಿದ್ದಾರೆ. ಇವರಿಗೆ ತಕ್ಷಣ ಯಾವ ಪರಿಹಾರವೂ ಸಿಕ್ಕಿಲ್ಲ. ದಯವಾಡಿ ಸರ್ಕಾರ ಕ್ರಮ ತೆಗೆದುಕೊಂಡು ಕೂಡಲೇ ಬಡವರಿಗೆ ಸಹಾಯ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.